ಸ್ಪೇನ್‌ಗೆ ವಿದೇಶಾಂಗ ವ್ಯವಹಾರಗಳು ಮತ್ತು ಜವಳಿ ಖಾತೆ ರಾಜ್ಯ ಸಚಿವ ಶ್ರೀ ಪಬಿತ್ರಾ ಮಾರ್ಗೆರಿಟಾ ಭೇಟಿ (ನವೆಂಬರ್ 3-5, 2026)

ವಿದೇಶಾಂಗ ವ್ಯವಹಾರಗಳು ಮತ್ತು ಜವಳಿ ಖಾತೆ ರಾಜ್ಯ ಸಚಿವ ಶ್ರೀ ಪಬಿತ್ರ ಮಾರ್ಗೆರಿಟಾ [MoS (PM)], 2026 ರ ನವೆಂಬರ್ 3-5 ರವರೆಗೆ ಸ್ಪೇನ್‌ಗೆ ಅಧಿಕೃತ ಭೇಟಿಯನ್ನು ಕೈಗೊಳ್ಳುತ್ತಾರೆ.

2. ಭೇಟಿಯ ಸಮಯದಲ್ಲಿ, ಸ್ಪೇನ್ ಆಯೋಜಿಸುತ್ತಿರುವ ಐಬೆರೋ-ಅಮೆರಿಕನ್ ಸಮ್ಮೇಳನದ 30 ನೇ ಶೃಂಗಸಭೆಯಲ್ಲಿ MoS (PM) ಭಾಗವಹಿಸಲಿದ್ದಾರೆ. ಭಾರತವು ಸಹವರ್ತಿ ವೀಕ್ಷಕ ರಾಷ್ಟ್ರವಾಗಿ ಈ ಸಮ್ಮೇಳನವನ್ನು ಸೇರಲು ಸಿದ್ಧವಾಗಿದೆ. ಸಮ್ಮೇಳನವು ಪ್ರಸ್ತುತ 22 ಸದಸ್ಯ ರಾಷ್ಟ್ರಗಳನ್ನು ಒಳಗೊಂಡಿದ್ದು - ಲ್ಯಾಟಿನ್ ಅಮೆರಿಕಾದಿಂದ 19 ಮತ್ತು ಯುರೋಪ್‌ನಿಂದ 3 (ಸ್ಪೇನ್, ಪೋರ್ಚುಗಲ್ ಮತ್ತು ಅಂಡೋರಾ), 12 ಸಹವರ್ತಿ ವೀಕ್ಷಕರು ಮತ್ತು 20 ಸಮಾಲೋಚನಾ ವೀಕ್ಷಕರು ಇದರಲ್ಲಿ ಸೇರಿದ್ದಾರೆ.

3. MoS(PM) ಅವರ ಭೇಟಿಯು ಭಾರತ-ಸ್ಪೇನ್ ಸಂಸ್ಕೃತಿ, ಪ್ರವಾಸೋದ್ಯಮ ಮತ್ತು ಕೃತಕ ಬುದ್ಧಿಮತ್ತೆಯ ಎರಡು ವರ್ಷದ ಚಾಲ್ತಿಯಲ್ಲಿರುವ ಆಚರಣೆಗಳಲ್ಲಿ ಪ್ರಮುಖ ಮೈಲಿಗಲ್ಲನ್ನು ಸೂಚಿಸುತ್ತದೆ. ಶೃಂಗಸಭೆಯ ನೇಪಥ್ಯದಲ್ಲಿ ಅವರು ಪ್ರಮುಖ ಸಹವರ್ತಿಗಳೊಂದಿಗೆ ದ್ವಿಪಕ್ಷೀಯ ಸಭೆಗಳನ್ನು ನಡೆಸಲಿದ್ದಾರೆ ಮತ್ತು ಮ್ಯಾಡ್ರಿಡ್‌ನಲ್ಲಿರುವ ಭಾರತೀಯ ಸಮುದಾಯದೊಂದಿಗೆ ಸಭೆ ನಡೆಸಲಿದ್ದಾರೆ.

ನವದೆಹಲಿ

ನವೆಂಬರ್ 01, 2026